# ಅಧ್ಯಾಯ-1 : ಐತಿಹಾಸಿಕ ಹಿನ್ನೆಲೆ(HISORICAL BACKGROUND)

**ಈ ಅಧ್ಯಾಯವು ಪ್ರಿಲಿಮ್ಸ್ & ಮುಖ್ಯ ಪರೀಕ್ಷೆ ಗೆ ತುಂಬ ಮಹತ್ವವಾದದು.**

## ಈ ಅಧ್ಯಾಯವನ್ನು ಯಾಕೆ ಅಧ್ಯಯನ ಮಾಡಬೇಕು?

- ಈ ಅಧ್ಯಾಯವು ಪರೀಕ್ಷಕರಿಗೆ ಅತ್ಯಂತ ನೆಚ್ಚಿನದು. ಪ್ರತಿ ವರ್ಷದ ( ಪ್ರಿಲಿಮ್ಸ್ ಮತ್ತು ಮುಖ್ಯಪರೀಕ್ಷೆ ) ಪತ್ರಿಕೆಯಲ್ಲಿ ಈ ಅಧ್ಯಾಯದಿಂದ ಪ್ರಶ್ನೆಗಳನ್ನು ಕೇಳಿರುವುದನ್ನು ಕಾಣಬಹುದು.
- ಭಾರತೀಯ ಸಂವಿಧಾನ ಮತ್ತು ರಾಜಕೀಯದ ಹಲವು ವೈಶಿಷ್ಟ್ಯಗಳು ಬ್ರಿಟಿಷ್ ಆಡಳಿತದ ಬೇರುಗಳನ್ನು ಹೊಂದಿವೆ. ಆದ್ದರಿಂದ ಬ್ರಿಟಿಷರು ಭಾರತದಲ್ಲಿ ಯಾವ ರೀತಿ ಆಡಳಿತವನ್ನು ನಡೆಸಿದರು ಮತ್ತು ಕೆಲವು ಘಟನೆಗಳನ್ನು ತಿಳಿದುಕೊಳ್ಳುವುದು ಮುಖ್ಯವಾಗಿದೆ.

## ಓದುವಾಗ ಅಭ್ಯರ್ಥಿಗಳು ಸಾಮಾನ್ಯವಾಗಿ ಎದುರಿಸುವ ಸಮಸ್ಯೆಗಳೆಂದರೆ

- ಬ್ರಿಟಿಷರ ಆಡಳಿತದಲ್ಲಿ ಅನೇಕ ಘಟನೆಗಳು ಇವೆ. ಅದನೆಲ್ಲ ಹೇಗೆ ನೆನಪಿಟ್ಟು ಕೊಳ್ಳಬೇಕು ?
- ಪ್ರತಿ ಕಾಯ್ದೆಯಲ್ಲೂ ಹಲವು ವೈಶಿಷ್ಟ್ಯಗಳಿವೆ. ತುಂಬ ದಿನದವರೆಗೆ ಇದನೆಲ್ಲ ಹೇಗೆ ಮರೆಯದೆ ನೆನಪಿಟ್ಟು ಕೊಳ್ಳಬೇಕು ? ತುಂಬ ಕನ್ಫ್ಯೂಸ್(CONFUSE) ಆಗುತ್ತದೆ.

ಅದಕೆಲ್ಲ ಪರಿಹಾರವೇ ಈ ನೋಟ್ಸ್ ಅನ್ನು ಬರೆದಿರುವುದು ಕಥೆ ಅಥವಾ ಚಿತ್ರದ ರೂಪದಲ್ಲಿ ಘಟನೆಗಳನ್ನು ಹೇಗೆ ಸುಲಭವಾಗಿ ನೆನಪಿಟ್ಟು ಕೊಳ್ಳಬಹುದು ಎಂದು ರಚಿಸಿದ್ದೇವೆ. ಇದು ನಿಮಗೆ ಅನುಕೂಲವಾಗುತ್ತದೆ ಎಂದು ನಂಬಿದ್ದೇವೆ.

## ಈ ಅಧ್ಯಾಯ ದಲ್ಲಿ ಮುಖ್ಯವಾಗಿ ತಿಳಿದುಕೊಳ್ಳಬೇಕಾದ ಅಂಶಗಳು

- 1600 ರಲ್ಲಿ ಬ್ರಿಟಿಷರು ಬ್ರಿಟನ್ ರಾಣಿಯಿಂದ ಅನುಮತಿ ಪಡೆದು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದರು.ಇದನ್ನೇ ರಾಯಲ್ ಚಾರ್ಟ್(ROYAL CHART) ಎನ್ನುವರು.
- 1765 ರಲ್ಲಿ, EIC(EAST INDIA COMPANY) ಯು 'ದಿ ವಾನಿ ಹಕ್ಕುಗಳನ್ನು' ಪಡೆದುಕೊಂಡಿತು - ಈ ಹಕ್ಕನ್ನು ಷಾ ಅಲಾಮ್ ಬಕ್ಸಾರ್ ಯುದ್ಧದಲ್ಲಿ ಸೋತನಂತರ ಮಂಜೂರು ಮಾಡಿದನು. ಇದರಿಂದ ಇಐಸಿಗೆ ವ್ಯಾಪಾರದ ಆಸಕ್ತಿಯಿಂದ ರಾಜಕೀಯದತ್ತ ತಮ್ಮ ಪ್ರವೇಶಕ್ಕೆ ಸದವಕಾಶ ಉಂಟಾಯಿತು.
- 1857 ರ ದಂಗೆ - ಸ್ವಾತಂತ್ರ್ಯಕ್ಕಾಗಿ ಪ್ರಾರಂಭವಾದ ಮೊದಲ ಯುದ್ಧ.ಇದನ್ನು 'ಸಿಪಾಯಿ ದಂಗೆ' /ರಾಷ್ಟ್ರೀಯ ದಂಗೆ ಎಂದು ಸಹ ಕರೆಯುವರು.

- ಸಿಪಾಯಿ ದಂಗೆಯ ಪರಿಣಾಮದಿಂದ 1858 ರಲ್ಲಿ - ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ ಆಡಳಿತ ಅಂತ್ಯಗೊಂಡಿತು. ನಂತರ ನೇರವಾಗಿ ಬ್ರಿಟಿಷ್ ಸರ್ಕಾರ ಭಾರತವನ್ನು ನೇರವಾಗಿ ಆಳಿತು. ಇದನ್ನೇ ಕ್ರೌನ್ ರೂಲ್ (CROWN RULE)ಎನ್ನುವರು.
- ಆಗಸ್ಟ್ 15, 1947 ರಂದು ಭಾರತಕ್ಕೆ ಸ್ವಾತಂತ್ರ್ಯ ನೀಡುವವರೆಗೂ ಕ್ರೌನ್ ಆಡಳಿತ ಮುಂದುವರೆಯಿತು.

**ನೀವು ಓದಿರುವ ಪುಸ್ತುಕದಿಂದ ಸೂಕ್ಷ್ಮವಾಗಿ ಗಮನಿಸಿದರೆ ಎರಡು ನಿಯಮಗಳನ್ನು ಗುರುತಿಸಬಹುದೇ? -**

- (1773-1858) ಕಂಪೆನಿ ಆಡಳಿತ (COMPANY RULE)
- (1858-1947) ಕ್ರೌನ್ ರೂಲ್ (CROWN RULE)

ಈಗ ಯೋಚಿಸಿ 1600 EIC ಭಾರತಕ್ಕೆ ಬಂದಾಗ ಅಂತಹ ಯಾವುದೇ ನಿಯಮಗಳಿರಲಿಲ್ಲ ಮತ್ತು 1773 ರಲ್ಲಿ ಕಂಪನಿ ನಿಯಮವು ಏಕೆ ಇದ್ದಕ್ಕಿದ್ದಂತೆ ಪ್ರಾರಂಭವಾಯಿತು?

ಈ 2 ರೂಲ್ ನಲ್ಲಿ ಮುಖ್ಯವಾಗಿ ಈ 3 ಕಾಯಿದೆ ಗಳನ್ನೂ ನೆನಪಿನಲ್ಲಿಟ್ಟುಕೊಳ್ಳಿ

| **ಕಂಪೆನಿ ಆಡಳಿತ (COMPANY RULE) (1773-1858)** | **ಕ್ರೌನ್ ರೂಲ್ (CROWN RULE) (1858-1947)** |
|---|---|
| 1. ರೆಗ್ಯುಲೇಟಿಂಗ್ ಆಕ್ಟ್ಸ್<br>2.. ಪಿಟ್ಸ್ ಇಂಡಿಯಾ ಆಕ್ಟ್ಸ್<br>3. ಚಾರ್ಟರ್ ಆಕ್ಟ್ಸ್ | 1.ಭಾರತ ಸರ್ಕಾರದ ಕಾಯ್ದೆಗಳು<br>2.ಇಂಡಿಯನ್ ಕೌನ್ಸಿಲ್ ಆಕ್ಟ್ಸ್<br>3.ಭಾರತ ಸ್ವಾತಂತ್ರ್ಯ ಕಾಯ್ದೆ |

## ಕಂಪೆನಿ ಆಡಳಿತ (COMPANY RULE) (1773-1858)

1773 ರಲ್ಲಿ ಈಸ್ಟ್ ಇಂಡಿಯಾ ಕಂಪೆನಿಯು ಆರ್ಥಿಕ ಸಮಸ್ಯೆ,ಹಾಗು ಇತರೆ ದೇಶಗಳಿಂದ ಸ್ಪರ್ಧೆಯನ್ನುಸಹ ಎದುರಿಸುತಿತ್ತು. ಮತ್ತು ಏಕಸ್ವಾಮ್ಯವನ್ನು ಕಾಪಾಡಿಕೊಳ್ಳು ವುದರಲ್ಲಿ ಸಹ ತೊಂದರೆಯನ್ನು ಅನುಭವಿಸುತಿತ್ತು

ನಮ್ಮ ಐಎಎಸ್ ಅಕಾಡೆಮಿ

ಈ ಕಂಪನಿಯು ಬ್ರಿಟಿಷ್ ಸಾಮ್ರಾಜ್ಯಕ್ಕೆ ತುಂಬ ಮುಖ್ಯವಾಗಿತ್ತು ಏಕೆಂದರೆ ಇದು ಭಾರತದಲ್ಲಿ ಮತ್ತು ಬೇರೆ ದೇಶದಲ್ಲೂ ಸಹ ಏಕಸ್ವಾಮ್ಯದ ವ್ಯಾಪಾರ ಕಂಪೆನಿಯಾಗಿತ್ತು ಮತ್ತು ಇದರಲ್ಲಿ ಅನೇಕ ಪ್ರಭಾವಶಾಲಿ ಜನರು ಷೇರುದಾರರಾಗಿದ್ದರು.

ಈಗ, ಈ ಷೇರುದಾರರು (ಕೆಲವರು ಸಂಸತ್ ಸದಸ್ಯರು ಸಹ ಬಾಗಿಯಾಗಿದ್ದರು)



"ನಾವು ಈ EIC ಜೊತೆ ಏನು ಮಾಡಬೇಕು? ಇದು ಸಾಕಷ್ಟು ಸಮಸ್ಯೆ ಯನ್ನು ಎದರಿಸುತ್ತಿದೆ ಹಾಗು ಇದರಿಂದ ಏನು ಲಾಭ ತರಲು ಸಾಧ್ಯವಾಗುತ್ತಿಲ್ಲ ಮತ್ತು ಅದರ ಬದ್ಧತೆಗಳನ್ನು ಪೂರೈಸಲು ಕೂಡ ಸಾಧ್ಯವಾಗುವತ್ತಿಲ್ಲ ..ಎಂದಂತೆಲ್ಲ ಯೋಚಿಸಿ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತದಲ್ಲಿ ಕೆಲವು ಆಕ್ಟ್ ಗಳನ್ನು ರಚಿಸೋಣ ಎಂದು ನಿರ್ಧರಿಸಿದರು "

**EIC ಯ ಮೇಲೆ ಕೆಲವು ನಿಯಂತ್ರಣವನ್ನು ತರುವುದಕ್ಕೆ ನಾವು ಆಕ್ಟ್ ಯನ್ನು ತರಬೇಕು ,ಹಾಗಾದರೆ ಅದನ್ನು ಏನೆಂದು ಕರಿಯೋಣ ??? ಅದೆ ರೆಗ್ಯುಲೇಟಿಂಗ್ ಆಕ್ಟ್**

**1773 ರೆಗ್ಯುಲೇಟಿಂಗ್ ಆಕ್ಟ್**

ಇದು ಬ್ರಿಟಿಷರು , ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ವ್ಯವಹಾರಗಳನ್ನು ನಿಯಂತ್ರಿಸಲು ಮತ್ತು ನಿರ್ಬಂಧಿಸಲು ಕೈಗೊಂಡ ಮೊಟ್ಟಮೊದಲ ಹೆಜ್ಜೆ

**ಕಾಯಿದೆ ಯ ಮುಖ್ಯಾಂಶಗಳು (FEATURES OF THE ACT)**

- ಬ್ರಿಟಿಷ ಸಂಸತ್ತು EIC ಕಂಪನಿಯ ಡೈರೆಕ್ಟರ್ ಹುದ್ದೆಗೆ ಕಂಪನಿಯ ಷೇರುದಾರರಿಂದ ಚುನಾವಣೆಯ ಮೂಲಕ ಆಯ್ಕೆ ಮಾಡುವ ವ್ಯವಸ್ಥೆ ಮಾಡಲಾಯಿತು .

- ಬಂಗಾಳದ ಗವರ್ನರ್‌ರನ್ನು ಗವರ್ನರ್ ಜನರಲ್ ರಾಗಿ ನೇಮಕ ಮಾಡಲಾಯಿತು **ವಾರನ್ ಹೇಸ್ಟಿಂಗ್ಸ್(1774-1785)** ಮೊಟ್ಟಮೊದಲ ಗವರ್ನರ್ ಜನರಲ್ ಆಗಿ ನೇಮಕಗೊಂಡರು. ಅವನ ಸಹಾಯಕ್ಕೆ ನಾಲ್ವರು ಸದಸ್ಯರು ಇದರಲ್ಲಿ ಇದ್ದರು

ಇವನ ಹೆಸರು ನೆನಪಿಟ್ಟುಕೊಳ್ಳುವುದು ಹೇಗೆ? - ಈ ಕಾಯಿದೆ ಬರುವ ತನಕ, EIC ಯಾವುದೇ ನಿಯಂತ್ರಣವಿಲ್ಲದೆ ಭಾರತದಲ್ಲಿ ಆನಂದಿಸುತಿತ್ತು . ಆದರೆ ಇದೀಗ ಅದನ್ನು ನಿಯಂತ್ರಿಸಲು ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್ ಬಂದರು. EIC ನವರು ಅವರನ್ನು **HATING** ಮಾಡಲು ಪ್ರಾರಂಭಿಸಿತು. (ಹ್ಯಾಟಿಂಗ್ -> ಹಾಸ್ಟಿಂಗ್ -> ವಾರೆನ್ ಹೇಸ್ಟಿಂಗ್ಸ್)

.

- ಈ ಕಾಯಿದೆ ಮೂಲಕ ಗವರ್ನರ್ ಜನರಲ್ ಭಾರತದ ಸಂಸ್ಥಾನಗಳ ಮೇಲೆ ನಿಯಂತ್ರಣ ಸಾದಿಸಲು ಅವಕಾಶವಾಯಿತು.
- ಮದ್ರಾಸ್ ಹಾಗೂ ಮುಂಬೈ ಗವರ್ನರ್ ಜನರಲ್‌ಗಳು ಬಂಗಾಳದ ಗವರ್ನರ್ ಜನರಲ್ ಅವರ ಅಧೀನದಲ್ಲಿ ಬರುವಂತೆ ಮಾಡಲಾಯಿತು.ಅದಕ್ಕಿಂತ ಮುಂಚೆ ಅವು ಸ್ವತಂತ್ರ ವಾಗಿದ್ದವು.
- 1774ರಲ್ಲಿ ಕಲ್ಕತ್ತದಲ್ಲಿ ಸುಪ್ರೀಂಕೋರ್ಟ್ ರಚನೆಗೆ ಅವಕಾಶ ಕಲ್ಪಿಸಿತು . ಒಬ್ಬರು ನ್ಯಾಯಾಧೀಶರು,3 ಜನ ಅಧೀನ ನ್ಯಾಯಾಧೀಶರನ್ನು ನೇಮಿಸಲಾಯಿತು.
- ಕಂಪನಿಯ ಸೇವಕರು ಇತರ ಯಾವುದೇ ಖಾಸಗಿ ವ್ಯವಹಾರದಲ್ಲಿ ತೊಡಗಿಕೊಳ್ಳುವಂತಿರಲಿಲ್ಲ ಮತ್ತು ದೇಶೀಯರಿಂದ ಲಂಚ ಪಡೆಯುವುದನ್ನು ಇದು ನಿಷೇಧಿಸಿತ್ತು.
- ಕೋರ್ಟ್ ಆಫ್ ಡೈರೆಕ್ಟರ್ಸ್ (ಕಂಪನಿಯ ಆಡಳಿತ ಮಂಡಳಿ) ತನ್ನ ಎಲ್ಲ ವ್ಯವಹಾರಗಳ (REVENUE,MILITARY,CIVIL,Etc..)ಬಗ್ಗೆ ಬ್ರಿಟಿಷ್ ಸರ್ಕಾರಕ್ಕೆ ವರದಿ ಮಾಡಬೇಕಿತ್ತು.

ರೇಗುಲೇಟಿಂಗ್ ಆಕ್ಟ್ ನಿಂದ ಏನಾದರು ಪ್ರಯೋಜನ ವಾಯಿತೆ??

ಇಲ್ಲ, ಕೆಲವು ಲೋಪ ದೋಷಗಳು ಹಾಗೆ ಇದ್ದವು. ಇಐಸಿಯ ನ್ಯಾಯಾಲಯದ ನಿರ್ದೇಶಕರು (ಸಿಒಡಿ) ಅವರೇ ಭ್ರಷ್ಟರಾಗಿದ್ದರು .ಆದ್ದರಿಂದ, 1781 ರಲ್ಲಿ, ಬ್ರಿಟಿಷ್ ಸರ್ಕಾರವು ಇದರ ಬಗ್ಗೆ ವಿಚಾರಣೆ ನಡೆಸಲು ಸಿಒಡಿ ರನ್ನು ಕರೆಯಿತು ಮತ್ತು ರೆಗ್ಯುಲೇಟಿಂಗ್ ಆಕ್ಟ್ನ ದೋಷಗಳನ್ನು ಸರಿಪಡಿಸಲು ಪ್ರಯತ್ನಿಸಿತು.

ಆದಾಗ್ಯೂ, ಸಿಒಡಿ ಬ್ರಿಟಿಷ್ ಸರಕಾರಕ್ಕೆ ಲಂಚ ನೀಡಿ ಮತ್ತು ಕೆಲವು ವರ್ಷಗಳಿಂದ ಮೌನವಾಗಿ ಉಳಿಯಲು ಸರ್ಕಾರವನ್ನು ವಿನಂತಿಸುವ ಒಂದು ಕಾಯಿದೆ ರಚನೆಯಾಯಿತು.

**ಪಿಟ್ ಇಂಡಿಯಾ ಆಕ್ಟ್ 1784**

ಇದನ್ನು ರಚಿಸಲು ಕಾರಣ ....??

- ಬ್ರಿಟಿಷ್ ಸರಕಾರವು 1773 ರ ನಿಯಂತ್ರಣಾ ಕಾಯಿದೆಗಳ ದೋಷಗಳನ್ನು ಸರಿಪಡಿಸಲು ಬಯಸಿತು,
- ಕಂಪೆನಿಯ ವ್ಯವಹಾರಗಳ ಮೇಲೆ ಪರಿಣಾಮಕಾರಿ ನಿಯಂತ್ರಣಕ್ಕಾಗಿ ಬ್ರಿಟಿಷ್ ಸಂಸತ್ತಿನಲ್ಲಿ ಬೇಡಿಕೆ ಹೆಚ್ಚಾಗಿ ಬೆಳೆಯಿತು . ಆದ್ದರಿಂದ ಅವರು ಪಿಟ್ ಇಂಡಿಯಾ ಆಕ್ಟ್ 1784 ಅನ್ನು ಅಂಗೀಕರಿಸಿದರು.

"ಪಿಟ್" ಎಂಬ ಹೆಸರು ಏಕೆ ? ಆಗಿನ ಬ್ರಿಟಿಶ್ ಪ್ರಧಾನಿ **ವಿಲಿಯಂ ಪಿಟ್**..

**ಕಾಯಿದೆ ಯ ಮುಖ್ಯಾಂಶಗಳು**

- EIC ನ ಸಿಒಡಿ ಭ್ರಷ್ಟರಾಗಿದ್ದರು ಎಂದು ಗೊತ್ತಾಯಿತು ,ಆದ್ದರಿಂದ ಅವರ ಅಧಿಕಾರವನ್ನು ಕಡಿಮೆ ಮಾಡಲು ನಿರ್ಧರಿಸಿತು. ಆದ್ದರಿಂದ EIC ಯು ವಾಣಿಜ್ಯ ಮತ್ತು ರಾಜಕೀಯ ಕಾರ್ಯಗಳನ್ನು ಪ್ರತ್ಯೇಕಿಸಿತು
- ಈಗ, COD ವಾಣಿಜ್ಯ ಕಾರ್ಯಗಳನ್ನು ಮಾತ್ರ ನೋಡಿಕೊಳ್ಳುತ್ತದೆ ಮತ್ತು ಹೊಸದಾಗಿ ರಚನೆ ಯಾದ ಬೋರ್ಡ್ ಆಫ್ ಕಂಟ್ರೋಲ್ (BOC) ರಾಜಕೀಯ ಕಾರ್ಯಗಳನ್ನು ನೋಡಿಕೊಳ್ಳುತ್ತದೆ.
- ಇದನ್ನು " ದ್ವಿಸರ್ಕಾರ SYSTEM OF DOUBLE GOVERNMENT) (COD + BOC) ಎಂದು ಕರೆಯಲಾಯಿತು
- BOC ಗೆ ಎಲ್ಲಾ ಕಾರ್ಯಾಚರಣೆಗಳ (ನಾಗರಿಕ ಮತ್ತು ಮಿಲಿಟರಿ) ಅಥವಾ ಭಾರತದಲ್ಲಿ "ಬ್ರಿಟಿಷ್ ಆಸ್ತಿ"(BRITISH POSSESSIONS) ಗಳ ಆದಾಯಗಳ ಮೇಲ್ವಿಚಾರಣೆ ಅಧಿಕಾರವನ್ನು ನೀಡಿ ತಮಗೆ ನಿರ್ದೇಶಿಸುವಂತೆ ಸೂಚಿಸಿತು.
- ಆದ್ದರಿಂದ, ಬ್ರಿಟಿಷ್ ಸರಕಾರವು ಕಂಪನಿಯ ವ್ಯವಹಾರಗಳ ಮೇಲೆ ಮತ್ತು ಅದರ ಆಡಳಿತದಲ್ಲಿ ಸರ್ವೋಚ್ಚ ನಿಯಂತ್ರಣವನ್ನು ನೀಡಲಾಯಿತು.

ಆದರೆ CODಯು ವಾಣಿಜ್ಯ ವಿಷಯದಲ್ಲಿ ಇನ್ನೂ ಕೆಲವು ಅಧಿಕಾರಗಳನ್ನು ಹೊಂದಿತ್ತು ಆದ್ದರಿಂದ, ಬ್ರಿಟಿಷ್ ಭಾರತದಲ್ಲಿ ಕೇಂದ್ರೀಕರಣದ ಕಡೆಗೆ ಗಮನಹರಿಸಿ ಚಾರ್ಟರ್ ಕಾಯಿದೆಗಳು ಮಾಡಲ್ಪಟ್ಟವು.

ಪಿಟ್ನ ಇಂಡಿಯನ್ ಆಕ್ಟ್ ನಲ್ಲಿ **"ಬ್ರಿಟಿಷ್ ಒಡೆತನದ ಭಾರತ** (BRITISH POSSESSIONS) " ಎಂದು ಮೊದಲ ಬಾರಿಗೆ ಕರೆದರು, ಬ್ರಿಟಿಷ್ ಭಾರತದಲ್ಲಿ ತಮ್ಮ ಸ್ವಾಮ್ಯವನ್ನು ಹೈಲೈಟ್ ಮಾಡಲು "ಚಾರ್ಟ್‌ಗಳನ್ನು " ತಯಾರಿಸಲು ನಿರ್ಧರಿಸಿತು.

## 1833 ರ ಚಾರ್ಟರ್ ಆಕ್ಟ್

1833 ರ ಚಾರ್ಟರ್ ಆಕ್ಟ್ ಅನ್ನು **ಸೇಂಟ್ ಹೆಲೆನಾ ಆಕ್ಟ್ 1833** ಎಂದು ಸಹ ಕರೆಯುತ್ತಾರೆ.

### ಕಾಯಿದೆ ಯ ಮುಖ್ಯಾಂಶಗಳು

- ಇಲ್ಲಿ ಸರ್ಕಾರವು ಬಂಗಾಳದ ಗವರ್ನರ್ ಜನರಲ್ ( GGB) ಬದಲಾಗಿ, ಗವರ್ನರ್ ಜನರಲ್ ಆಫ್ ಇಂಡಿಯಾ (GGI) ಅನ್ನು ನೇಮಿಸಿತು GGIಗೆ ಎಲ್ಲಾ ನಾಗರಿಕ ಮತ್ತು ಮಿಲಿಟರಿ ಅಧಿಕಾರಗಳನ್ನು ನೀಡಿತು.
- ಇದು ಕಂಪನಿಯ ಏಕಸ್ವಾಮ್ಯವನ್ನು ರದ್ದುಗೊಳಿಸಿತು
- ಈ ಕಾಯಿದೆ ಮೂಲಕ ಸಂಪೂರ್ಣ ಬ್ರಿಟಿಷ್ ಭಾರತಕ್ಕೆ, GGIಗೆ ಪ್ರತ್ಯೇಕ ಶಾಸನ ಅಧಿಕಾರವನ್ನು ನೀಡಲಾಯಿತು.
- **ಲಾರ್ಡ್ ವಿಲಿಯಂ "ಬೆಂಟಿಕ್ " ಭಾರತದ ಮೊದಲ ಗವರ್ನರ್ ಜನರಲ್ ಆಗಿ ನೇಮಕವಾದರು.**
- EIC ಸಂಪೂರ್ಣವಾಗಿ ಆಡಳಿತಾತ್ಮಕ ಅಂಗವಾಗಿ ಉಳಿಯಿತು (ಸರ್ಕಾರವು ಏನು ಹೇಳುತ್ತದೆ ಯೊ ಅದನ್ನು ಕಾರ್ಯಗತಗೊಳಿಸುವು ದು ).
- 1833 ರ ಚಾರ್ಟರ್ ಆಕ್ಟ್ ಸಿವಿಲ್ ಸೇವಕರನ್ನು ಆರಿಸಿಕೊಳ್ಳಲು ಓಪನ್ ಸ್ಪರ್ಧೆಯ ವ್ಯವಸ್ಥೆಯನ್ನು ಪರಿಚಯಿಸಲು ಪ್ರಯತ್ನಿಸಿತು (ಭಾರತೀಯರನ್ನು ಒಳಗೊಂಡಂತೆ), ಆದರೆ COD ಒಪ್ಪಲಿಲ್ಲ - ದಯವಿಟ್ಟು ಕನಿಷ್ಠ ಈ ಅವಕಾಶವನ್ನು ನಿರಾಕರಿಸುವುದು ಒಳಿತು ಎಂದರು. ಆದ್ದರಿಂದ ಅವರ ಮನವಿಯಂತೆ ನಿರಾಕರಿಸಲಾಯಿತು.

## 1853 ರ ಚಾರ್ಟರ್ ಆಕ್ಟ್

### ಕಾಯಿದೆ ಯ ಮುಖ್ಯಾಂಶಗಳು

- GGI ಒಬ್ಬರಿಗೆ ಎಲ್ಲ ಕೆಲಸ ಮಾಡಲಾಗಲಿಲ್ಲ. ಆದ್ದರಿಂದ **ಗವರ್ನರ್-ಜನರಲ್ ಕೌನ್ಸಿಲ್ ನ್ನು ಶಾಸಕಾಂಗ ಮತ್ತು ಕಾರ್ಯಂಗದ** ಕಾರ್ಯಗಳನ್ನು ಮೊದಲ ಬಾರಿಗೆ ಪ್ರತ್ಯೇಕಿಸಿತು
- ಈ ಆಕ್ಟ್ ಪ್ರಕಾರ ಪ್ರತ್ಯೇಕ GG. ಲೆಜಿಸ್ಲೇಟಿವ್ ಕೌನ್ಸಿಲ್ ಅನ್ನು ರಚಿಸಿತು - ಇದನ್ನು "ಇಂಡಿಯನ್ (ಸೆಂಟ್ರಲ್) ಲೆಜಿಸ್ಲೇಟಿವ್ ಕೌನ್ಸಿಲ್" ಎಂದು ಕರೆಯಲಾಗುತ್ತದೆ. ಮೊದಲ ಬಾರಿಗೆ ಭಾರತೀಯರಿಗೆ ಶಾಸನ ಸಭೆಯಲ್ಲಿ ಸ್ಥಳೀಯರಿಗೂ ಅನುಮತಿಸಲಾಯಿತು.
- **ನಾಗರೀಕ ಸೇವಾ ಸಿಬ್ಬಂದಿಯ ನೇಮಕಕ್ಕೆ ಮುಕ್ತ ಸ್ಪರ್ಧೆಯ ವ್ಯವಸ್ಥೆಯನ್ನು ಪರಿಚಯಿಸಿತು**
- **ಭಾರತೀಯರಿಗೆ ನಾಗರೀಕ ಸೇವೆಯಲ್ಲಿ ಅವಕಾಶ ಕಲ್ಪಿಸಿತು.**

- ಭಾರತೀಯ ಸಾರ್ವಜನಿಕ ಸೇವೆಯ ಬಗೆಗೆ ವರದಿ ಸಲ್ಲಿಸಲು ಮೆಕಾಲೆ ಸಮಿತಿಯನ್ನು ತರಲಾಯಿತು.

ಈ ಮೇಲಿನ ಕಾಯಿದೆಗಳಿಂದ ತಿಳಿಯುವುದು ಏನಂದರೆ ಹೇಗೆ ಬ್ರಿಟಿಷ್ ಸರ್ಕಾರವು EIC ವ್ಯವಹಾರಗಳನ್ನು ನಿಯಂತ್ರಿಸಲು ಸ್ಥಿರವಾದ ಪ್ರಗತಿಯನ್ನು ಮಾಡಿತು ಮತ್ತು ಸರ್ಕಾರದ ಸಂಪೂರ್ಣ ಕೇಂದ್ರೀಕರಣಕ್ಕೆ ಅಡಿಪಾಯವನ್ನು ಹೇಗೆ ಹಾಕಿತು ಎಂಬುದನ್ನು ನಾವು ಕಾಣಬಹುದು .

1857 ರ ಹೊತ್ತಿಗೆ ಬ್ರಿಟಿಷರು ಭಾರತದಲ್ಲಿ ವಿಸ್ತರಣಾ ನೀತಿ ಅನುಸರಿಸಿದರು. GGIಗಳು ಮಾಡಿದ ನೀತಿಗಳಿಂದ ಭಾರತೀಯ ಸಮಾಜದ ಪ್ರತಿ ವಿಭಾಗಕ್ಕೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಇದು ಭಾರತದ ಇತಿಹಾಸದ ಪ್ರಮುಖ ಘಟನೆಗಳಲ್ಲಿ ಒಂದಾಗಲು ಕಾರಣವಾಯಿತು - ಅದೆ 1857 ರ ದಂಗೆ ಸಿಪಾಯಿ ದಂಗೆ . ಈಸ್ಟ್ ಇಂಡಿಯಾ ಕಂಪನಿಗೆ ವಿರುದ್ಧವಾಗಿ ಮೊದಲ ದಂಗೆ ಇದು ಅದು ಬೃಹತ್ ಸ್ವರೂಪವನ್ನು ಪಡೆದಿದೆ.(ಭಾರತದ ಇತಿಹಾಸದಲ್ಲಿ ನೀವು ಇದರ ಬಗ್ಗೆ ಸಂಕ್ಷಿಪ್ತ ವಾಗಿ ಅಧ್ಯಯನ ಮಾಡುವಿರಿ )

ಆದ್ದರಿಂದ, ಈ ದಂಗೆ ಅಥವಾ ದಂಗೆಯಿಂದಾಗಿ, ಬ್ರಿಟೀಷರು ಭಾರತಕ್ಕೆ ಒಳ್ಳೆಯ ಸರಕಾರಕ್ಕಾಗಿ ಕಾಯಿದೆಯನ್ನು ಜಾರಿಗೆ ತರಲು ನಿರ್ಧರಿಸಿದರು.ಅದೇ ಭಾರತ ಸರ್ಕಾರದ ಶಾಸನದ ಕಾಯಿದೆ

## ಕ್ರೌನ್ ರೂಲ್ (1858-1947)CROWN RULE

ಇನ್ನು ಮುಂದೆ ಬರುವ ಎಲ್ಲಾ ಕಾಯಿದೆಗಳನ್ನು ಭಾರತ ಸರಕಾರ (GOI) ಕಾಯಿದೆಗಳು ಅಥವಾ ಇಂಡಿಯನ್ ಕೌನ್ಸಿಲ್ ಕಾಯಿದೆಗಳು ಎಂದು ಕರೆಯಬಹುದು

### 1858 ರ ಭಾರತ ಸರ್ಕಾರ ಕಾಯಿದೆ

ಈ ಕಾಯಿದೆಯು ಈಸ್ಟ್ ಇಂಡಿಯಾ ಕಂಪನಿಯನ್ನು ರದ್ದುಪಡಿಸಿತು ಮತ್ತು ಸರ್ಕಾರ, ಪ್ರದೇಶಗಳು ಹಾಗು ಆದಾಯಗಳನ್ನು ಬ್ರಿಟಿಷ್ ರಿಗೆ ವರ್ಗಾಯಿಸಿತು.

1858 ರಲ್ಲಿ ಕಂಪೆನಿಯ ರೂಲ್ ಕೊನೆಗೊಂಡಿತು.ನಂತರ ಕ್ರೌನ್ ರೂಲ್ ಪ್ರಾರಂಭವಾಯಿತು.

#### ಕಾಯಿದೆ ಯ ಮುಖ್ಯಾಂಶಗಳು

- ಭಾರತವು ಬ್ರಿಟಿಷ್ ರಾಣಿಯ ಆಡಳಿತಕ್ಕೆ ಒಳಪಟ್ಟಿತ್ತು (ಕ್ರೌನ್ ರೂಲ್)

- ಈ ಕಾಯಿದೆಯಿಂದ GGI ಹುದ್ದೆಯಿಂದ Viceroy of India (VOI) ಎಂದು ಬದಲಾಯಿಸಲಾಯಿತು. **ಲಾರ್ಡ್ ಕ್ಯಾನಿಂಗ್ರವರನ್ನು ಭಾರತದ ಮೊದಲ ವೈಸ್ರಾಯ್ ಆಗಿ ನೇಮಿಸಲಾಯಿತು. (ಭಾರತದ ಕೊನೆಯ ಗವರ್ನರ್ ಜನರಲ್ ಕೂಡ ಲಾರ್ನ್ಡಿಂಗ್ ಕ್ಯಾನಿಂಗ್.)**
- 1858 ರ ಭಾರತ ಸರ್ಕಾರ ಕಾಯಿದೆಯು, 1784 ರ ಪಿಟ್ ಇಂಡಿಯಾ ಆಕ್ಟ್ ನ **' ದ್ವಿ ಸರ್ಕಾರದ ವ್ಯವಸ್ಥೆಯನ್ನು' ರದ್ದುಗೊಳಿಸಿತು . (ಅಂದರೆ ಇದು COD + BOC ಅನ್ನು ರದ್ದುಪಡಿಸಿತು)**
- ಈ ಕಾಯಿದೆಯು " ರಾಜ್ಯ ಕಾರ್ಯದರ್ಶಿ" ("Secretary of State for India"" (SOS)) ಎಂಬ ಹೊಸ ಹುದ್ದೆಯನ್ನು ರಚಿಸಿತು - COD ಯ ಆಡಳಿತಾತ್ಮಕ ಅಧಿಕಾರ ಮತ್ತು ನಿಯಂತ್ರಣವನ್ನು SOS ಗೆ ನೀಡಲಾಯಿತು.
- ರಾಜ್ಯ ಕಾರ್ಯದರ್ಶಿರವರು ಬ್ರಿಟಿಷ್ ಕ್ಯಾಬಿನೆಟ್ನ ಸದಸ್ಯರು ಆಗಿದ್ದರು.
- .ಈ ಆಕ್ಟ್ ನಲ್ಲಿ ರಾಜ್ಯ ಕಾರ್ಯದರ್ಶಿಗೆ ಸಹಾಯ ಮಾಡಲು 15 ಸದಸ್ಯರವುಳ್ಳ ಕೌನ್ಸಿಲ್ ಆಫ್ ಇಂಡಿಯಾವನ್ನು ರಚಿಸಲಾಯಿತು . ಇವರಲ್ಲಿ ೭ ಜನರನ್ನು ಚಕ್ರವರ್ತಿ ನೇಮಕ ಮಾಡಿದರೆ ಉಳಿದ ಸದಸ್ಯರನ್ನು ಆಯ್ಕೆ ಮಾಡಲಾಗುತ್ತಿತ್ತು.
- ರಾಜ್ಯ ಕಾರ್ಯದರ್ಶಿಯು ಪ್ರತಿವರ್ಷ ಭಾರತದ ಆಡಳಿತದ ಬಗ್ಗೆ ಪ್ರತಿ ವರ್ಷ ಬ್ರಿಟನ್ ಸಂಸತ್ ನಲ್ಲಿ ಮಂಡಿಸಬೇಕಿತ್ತು.
- ಕೌನ್ಸಿಲ್ ಆಫ್ ಇಂಡಿಯಾಗೆ ಇಲ್ಲಿನ ಮಿಲಿಟರಿ ಹಾಗು ನಾಗರೀಕ ಸಿಬ್ಬಂದಿಯ ಮೇಲಿನ ನಿಯಂತ್ರಣವನ್ನು ನೀಡಲಾಯಿತು.

ಭಾರತದ ಆಡಳಿತವು ಅಧಿಕಾರಿಗಳ ಮೂಲಕ ನಡಿಯುತ್ತಿತ್ತು ಮತ್ತು ಜನಾಭಿಪ್ರಾಯಕ್ಕೆ ಮಾನ್ಯತೆ ಇರಲಿಲ್ಲ.

- 1853 ರ ಚಾರ್ಟರ್ ಆಕ್ಟ್ ನಲ್ಲಿ ಲೆಜಿಸ್ಲೇಟಿವ್ ಕೌನ್ಸಿಲ್ ಎಂಬ ಪ್ರತ್ಯೇಕ ಶಾಸನ ಸಭೆಯನ್ನು ರಚಿಸಿದ್ದರು ಎಂದು ನಾವು ನೋಡಿದ್ದೇವೆ.
- 1857 ರ ಬಂಡಾಯದ ನಂತರ, ಬ್ರಿಟಿಷ್ ಸರ್ಕಾರವು ಭಾರತ ದೇಶದ ಆಡಳಿತದಲ್ಲಿ ಭಾರತೀಯರ ಸಹಕಾರವನ್ನು ಹುಡುಕುವ ಅವಶ್ಯಕತೆಯಿದೆ ಎಂದು ಭಾವಿಸಿತು.

ಈ ನೀತಿಯ ಅನುಸಾರವಾಗಿ, ಬ್ರಿಟಿಷ್ ಪಾರ್ಲಿಮೆಂಟ್ ಮೂರು ಕಾಯಿದೆಗಳನ್ನು ಜಾರಿಗೊಳಿಸಿತು

ಅವುಗಳೆ

1.1861ರ ಭಾರತೀಯ ಕೌನ್ಸಿಲ್ ಕಾಯಿದೆ

2.1892ರ ಭಾರತೀಯ ಕೌನ್ಸಿಲ್ ಕಾಯಿದೆ

3. 1909 ರ ಭಾರತೀಯ ಕೌನ್ಸಿಲ್ ಕಾಯಿದೆ

## 1861ರ ಭಾರತೀಯ ಕೌನ್ಸಿಲ್ ಕಾಯಿದೆ

### ಕಾಯಿದೆ ಯ ಮುಖ್ಯಾಂಶಗಳು

- ಈ ಕಾಯಿದೆಯು ಭಾರತೀಯರಿಗೆ ಕಾನೂನು-ರೂಪಿಸುವ ಪ್ರಕ್ರಿಯೆಯೊಂದಿಗೆ ಭಾಗವಹಿಸಲು ಅವಕಾಶಕಲ್ಪಿಸಿತು.
- ಶಶಾನೀಯ ಪರಿಷತ್ ಗೆ VOI ಗೆ ಕೆಲವು ಭಾರತೀಯರನ್ನು ಸದಸ್ಯರೆಂದು ನಾಮಕರಣ ಮಾಡುವಹಕ್ಕನು ಒದಗಿಸಿತು.
- (1862 ರಲ್ಲಿ, ಆಗಿನ ವೈಸ್ರಾಯ್ ಲಾರ್ಡ್ ಕ್ಯಾನಿಂಗ್, ಮೂರು ಭಾರತೀಯರನ್ನು ತನ್ನ ಶಾಸಕಾಂಗ ಸಭೆಗೆ ನಾಮನಿರ್ದೇಶನ ಮಾಡಿದರು ಅವರುಗಳೆ ಬನಾರಸಿನ ರಾಜ, ಪಟಿಯಾಲದ ಮಹಾರಾಜಾ ,ಸರ್ ದಿನಕರ್ ರಾವ್ )
- . ಈ ಕಾಯಿದೆಯು ವಿಕೇಂದ್ರೀಕರಣ ಪ್ರಕ್ರಿಯೆಯನ್ನು ಪ್ರಾರಂಭಿಸಿತು ಇದರ ಪ್ರಯುಕ್ತ ಬಾಂಬೆ ಮತ್ತು ಮದ್ರಾಸ್ ಪ್ರಾಂತ್ಯಗಳಿಗೆ ಶಾಸನೀಯ ಪರೀಷತ್ತುಗಳು ಪುನಃಸ್ಥಾಪಿಸಲ್ಪಟ್ಟವು.
- ಬಂಗಾಳ, ನಾರ್ತ್-ವೆಸ್ಟರ್ನ್ ಫ್ರಾಂಟಿಯರ್ ಪ್ರಾಂತ್ಯ (NWFP) ಮತ್ತು ಪಂಜಾಬ್ಗೆ ಹೊಸ ಶಾಸನ ಸಭೆಗಳನ್ನು ಸ್ಥಾಪಿಸಲು ಸಹ ಈ ಕಾಯಿದೆ ನೆರವಾಯಿತು.

  **(NWFP is in present day Pakistan and the name is changed to "Khyber-Pakhtoonkhwa".)**
- ಲಾರ್ಡ್ ಕ್ಯಾನಿಂಗ್ ರವರು 'Portfolio' system' ನ್ನು ಪರಿಚಯಿಸಿದರು - ಅಂದರೆ ಇಂಡಿಯನ್ ಕೌನ್ಸಿಲ್ ಆಕ್ಟ್ (ICA) 1861 VOI ರ ಕಾರ್ಯಕಾರಿ ಮಂಡಳಿಯಿಂದ ಕ್ಯಾಬಿನೆಟ್ ಆಗಿ ರೂಪಾಂತರಿಸಿತು ಮತ್ತು ಅದನ್ನು ಪೋರ್ಟ್ಫೋಲಿಯೋ ವ್ಯವಸ್ಥೆಯಲ್ಲಿ ನಿರ್ವಹಿಸಲು ಅನುವು ನೀಡಿತು . ಹೀಗಾಗಿ, ಕಾರ್ಯನಿರ್ವಾಹಕ ಕೌನ್ಸಿಲ್ನಲ್ಲಿನ 6 ಸದಸ್ಯರು ಪ್ರತ್ಯೇಕ ಇಲಾಖೆಗಳ ವಹಿಸಿಕೊಂಡರು.
- Ordinance making power:- ಈ ಕಾಯಿದೆಯು ತುರ್ತು ಪರಿಸ್ಥಿತಿಯಲ್ಲಿ ಆಜ್ಞೆಯನ್ನು ಹೊರಡಿಸಲು ಲೆಜಿಸ್ಲೇಟಿವ್ ಕೌನ್ಸಿಲ್ನಲ್ಲಿನ ಒಪ್ಪಿಗೆ ಇಲ್ಲದಿದ್ದರೂ ಆಜ್ಞೆಯನ್ನು ಹೊರಡಿಸುವ ಅಧಿಕಾರ VOI ಗೆ ನೀಡಿತು. , ಇಂತಹ ಆದೇಶದ ಅವಧಿ 6 ತಿಂಗಳ ಮಾತ್ರ ಆಗಿತ್ತು.

ಹಾಗಾದರೆ Ordinance making power ಎಂದರೇನು ?? ಇದರ ಸಂಕ್ಷಿಪ್ತ ವಿವರಣೆಯನ್ನು President of India.ಎಂಬ ಅಧ್ಯಾಯದಲ್ಲಿ ಓದುವಿರಿ.

## 1892ರ ಭಾರತೀಯ ಕೌನ್ಸಿಲ್ ಕಾಯಿದೆ

### ಕಾಯಿದೆ ಯ ಮುಖ್ಯಾಂಶಗಳು

- ಕೇಂದ್ರ ಮತ್ತು ಪ್ರಾಂತೀಯ ಶಾಸನೀಯ ಪರಿಷತ್ ನಲ್ಲಿ ಭಾರತೀಯ (non-official) ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಆದಾಗ್ಯೂ ಅಧಿಕೃತ ಬಹುಪಾಲು ಭಾರತೀಯರು ಅಲ್ಲದವರಿದ್ದರು . .
- ಶಾಸನೀಯ ಪರಿಷತ್ ಗಳ ಕಾರ್ಯ ಚಟುವಟಿಕೆಗಳನ್ನು ಹೆಚ್ಚಿಸಲಾಯಿತು ಮತ್ತು ಅವುಗಳಲ್ಲಿ ಸದಸ್ಯರಿಗೆ ಬಜೆಟ್ ಚರ್ಚಿಸುವ ಮತ್ತು ಪ್ರಶ್ನಿಸುವ ಅಧಿಕಾರವನ್ನು ನೀಡಲಾಯಿತು.
- ಶಾಸನೀಯ ಪರಿಷತ್ ಗೆ ಅಧಿಕಾರೇತರ ಸದಸ್ಯರ ಶಿಫಾರಸಿನ ಮೇರೆಗೆ ನಾಮನಿರ್ದೇಶನ ಮಾಡುವ ಅಧಿಕಾರ ನೀಡಿತು
- ಕೇಂದ್ರ ಪರಿಷತ್ ಗೆ ವೈಸರಾಯ್,ಪ್ರಾಂತ್ಯ ಪರಿಷತ್ ಗೆ ಆಯಾ ರಾಜ್ಯಪಾಲರು ನಾಮಕರಣ ಮಾಡುವ ಅಧಿಕಾರ ಹೊಂದಿದ್ದರು
- ಕೇಂದ್ರ ಮತ್ತು ಪ್ರಾಂತೀಯ ಶಾಸಕಾಂಗ ಮಂಡಳಿಗಳಲ್ಲಿ ಕೆಲವು ಅನಧಿಕೃತ ಸ್ಥಾನಗಳನ್ನು ತುಂಬುವುದಕ್ಕೆ ಚುನಾವಣೆಯ ಬಳಕೆಯ ನಿಯಮವನ್ನು ಸೀಮಿತವಾಗಿ ಮತ್ತು ಪರೋಕ್ಷವಾಗಿ ಒದಗಿಸಿತು. ಆದಾಗ್ಯೂ, "ಚುನಾವಣೆ" ಎಂಬ ಶಬ್ದವನ್ನು ಆಕ್ಟ್ ನಲ್ಲಿ ಬಳಸಿಲ್ಲ

## 1909 ರ ಭಾರತೀಯ ಕೌನ್ಸಿಲ್ ಕಾಯಿದೆ (ಮಿಂಟೋ – ಮೋರ್ಲೆ –ಸುಧಾರಣಾ ಕಾಯಿದೆ )

### ಕಾಯಿದೆ ಯ ಮುಖ್ಯಾಂಶಗಳು

- ಈ ಕಾಯಿದೆಯನ್ನು ಮೊರ್ಲೆ-ಮಿಂಟೋ ಸುಧಾರಣಾ ಕಾಯಿದೆ ಎಂತಲೂ ಕರೆಯುತ್ತಾರೆ (ಲಾರ್ಡ್ ಮೊರ್ಲೆ ರವರು SOS ಆಗಿದ್ದರು ,ಮತ್ತು ಲಾರ್ಡ್ ಮಿಂಟೋ ರವರು VOI ಆಗಿದ್ದರು
- ಈ ಕಾಯಿದೆಯಂದ ಕೇಂದ್ರ ಶಾಸನ ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು 16 ರಿಂದ 60 ಕ್ಕೆ ಹೆಚ್ಚಿಸಿದರು.ಸಂಸ್ಥಾನಗಳ ಶಾಸನ ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ಸಹ ಹೆಚ್ಚಿಸಲಾಯಿತು.
- ಭಾರತದಲ್ಲಿ ಕೋಮು ಆಧಾರಿತ ಪ್ರಾತಿನಿಧ್ಯತೆಯನ್ನು ಜಾರಿಗೊಳಿಸಿ ಮುಸ್ಲಿಮರಿಗೆ ಪ್ರತ್ಯೇಕ ಪ್ರಾತಿನಿಧ್ಯತೆಯನ್ನು ನೀಡಿ ಆ ಪ್ರತಿನಿಧಿಗಳು ಮುಸ್ಲಿಮರಿಂದಲೇ ಆಯ್ಕೆ ಮಾಡಲಾಯಿತು
- ಇದರ ಜೊತೆಗೆ ಜಮೀನ್ದಾರರು, ಚೇಂಬರ್ ಆಫ್ ಕಾಮರ್ಸ್ ಹಾಗು ವಿಶ್ವವಿಧ್ಯನಿಲ ಯದವರಿಗೂ ಪ್ರತ್ಯೇಕ ಪ್ರತಿನಿಧ್ಯತೆ ನೀಡಿ ಭಾರತೀಯ ಸಮಾಜದಲ್ಲಿ ಕೋಮುವಾದ ಹಾಗು ಭಿನ್ನತೆ ಮೂಡಲು ಅವಕಾಶ ಮಾಡಿತು.
- ಶಾಸನ ಪರಿಷತ್ತಿನ ಕಾರ್ಯ ಚಟುವಟಿಕೆಗಳಲ್ಲಿ ಸುಧಾರಣೆ ತಂದು ಚರ್ಚೆ ಆಧಾರಿತ ನೀತಿ ನಿಯಮ ರಚನೆಗೆ ಅವಕಾಶ ಮಾಡಿತು.

- ಸದಸ್ಯರುಗಳು ಪ್ರಶ್ನೆ ಹಾಗು ಉಪಪ್ರಶ್ನೆಗಳನ್ನು ಕೇಳುವ ಮೂಲಕ ಆಡಳಿತ ಮೇಲೆ ನಿಯಂತ್ರಣಕ್ಕೆ ಅವಕಾಶ ಮಾಡಿತು.
- ರಾಜಕೀಯ ಅಪರಾಧಿಗಳಿಗೆ ಚುನಾವಣ ಅನರ್ಹತೆಯನ್ನು ವಿಧಿಸಲಾಯಿತು.ಹಾಗು ಪರಿಷತ್ತಿನ ಸದಸ್ಯರು ನಿರ್ಣಯ ಮಂಡನೆಗೆ ಅವಕಾಶ ಕಲ್ಪಿಸಿತು.
- ಪ್ರಥಮ ಬಾರಿಗೆ ವೈಸರಾಯ್ರವರು ಹಾಗು ರಾಜ್ಯಪಲ ರುಗಳ ಕಾರ್ಯಾಂಗೀಯ ಪರಿಷತ್ತಿಗೆ (Executive Council)ಭಾರತೀಯರನ್ನು ನೇಮಕ ಮಾಡಲು ಪ್ರಾರಂಭವಾಯಿತು.
- ಸತ್ಯೇಂದ್ರ ಪ್ರಸಾದ್ ಸಿನ್ಹರವರು ವೈಸರಾಯ್ ರವರ ಕಾರ್ಯಾಂಗೀಯ ಪರಿಷತ್ತಿಗೆ ನೇಮಕಗೊಂಡು ಪ್ರಥಮ ಭಾರತೀಯ.
- ಐಸಿಎ 1909 ಮುಸ್ಲಿಮರಿಗೆ ಕೋಮು ಪ್ರಾತಿನಿಧ್ಯವನ್ನು ಪರಿಚಯಿಸಿತು - 'ಪ್ರತ್ಯೇಕ ಮತದಾರರ' ಪರಿಕಲ್ಪನೆ.ಈ ಕಾಯಿದೆ ಯಿಂದ ಪ್ರಾರಂಭವಾಯಿತು . (ಲಾರ್ಡ್ ಮಿಂಟೋ ಕಮ್ಯುನನಲ್ ಚುನಾವಣಾ ಪಿತಾಮಹ ಎಂದು ಕರೆಯಲ್ಪಟ್ಟನು.)

## 1919 ರ ಭಾರತ ಸರ್ಕಾರ ಕಾಯಿದೆ (1919 ಮಾಂಟೆಗು-ಚೆಲ್ಮ್ಸ್ ಫರ್ಡ್ ಸುಧಾರಣೆಗಳು)

- 1917 ರಲ್ಲಿ ಎಡ್ವಿನ್ ಸ್ಯಾಮ್ಯುಯೆಲ್ ಮೊಂಟೆಗೋ ರವರು , ಆಗಿನ SOS ಆಗಿ ಭಾರತದಲ್ಲಿ ಬ್ರಿಟಿಷ್ ನೀತಿಗಳ ಗುರಿಯನ್ನು ವಿವರಿಸುವ ಒಂದು ಐತಿಹಾಸಿಕ ಘೋಷಣೆಯನ್ನು (ಅದನ್ನೇ 1917 ರ ಆಗಸ್ಟ್ ಘೋಷಣೆ ಅಥವಾ ಮಾಂಟೆಗ್ ರಿಫಾರ್ಮ್ಸ್ ಎಂದು ಕರೆಯುತ್ತಾರೆ) ಮಾಡಿದರು.
- 1917 ರ ಆಗಸ್ಟ್ 20 ರಂದು ಬ್ರಿಟೀಷ್ ಸರ್ಕಾರವು ಮೊದಲ ಬಾರಿಗೆ ಭಾರತದಲ್ಲಿನ "ಜವಾಬ್ದಾರಿಯುತ ಸರ್ಕಾರವನ್ನು ಕ್ರಮೇಣವಾಗಿ ಪರಿಚಯಿಸುವ" ಉದ್ದೇಶ ಎಂದು ಘೋಷಿಸಿತು.
- 1919 ರ ಭಾರತ ಸರ್ಕಾರ ಕಾಯಿದೆಯನ್ನು ರಚಿಸಿದರು , ಆದರೆ ಇದು 1921 ರಲ್ಲಿ ಜಾರಿಗೆ ಬಂದಿತು. ಈ ಕಾಯಿದೆಯನ್ನು ಮೊಂಟಾಗು-ಚೆಲ್ಮ್ಸ್ಫೋರ್ಡ್ ರಿಫಾರ್ಮ್ಸ್ ಎಂದು ಕರೆಯಲಾಗುತ್ತದೆ (ಆ ಸಮಯದಲ್ಲಿ ಮೊಂಟಾಗು ರವರು SOS ಆಗಿದ್ದರು, ಮತ್ತು ಲಾರ್ಡ್ ಚೆಲ್ಮ್ಸ್ಫೋರ್ಡ್ ರವರು VOI ಆಗಿದ್ದರು ).

### ಕಾಯಿದೆ ಯ ಮುಖ್ಯಾಂಶಗಳು